ಆ 1998-99ನೇ ಸಾಲಿನ ಅಂತ್ಯದವರೆಗೆ ಶಿಗ್ಗಾಂವ್ ಮತ್ತು ಸವಣೂರು ಪಟ್ಟಣದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಅಭಿವೃದ್ಧಿ ಕಾಮಗಾರಿಗಳಾದ ಕೊಳವೆ ಬಾವಿ, ರಸ್ತೆ, ಬೀದಿ ದೀಪ, ಚರಂಡಿ, ಕಿರು ನೀರು ಸರಬರಾಜು, ರಸ್ತೆ ದಾಟು ಮತ್ತು ಸಮುದಾಯ ಭವನ ನಿರ್ಮಾಣ ಕೆಲಸ ಪೂರ್ಣಗೊಂಡಿರುತ್ತವೆ. ಸವಣೂರು ಪಟ್ಟಣದ ವಡ್ಡರ ಓಣಿ ಕೊಳಚೆ ಪ್ರದೇಶದಲ್ಲಿ 56 ಮನೆಗಳ ನಿರ್ಮಾಣದ ಕಾಮಗಾರಿ ಮುಗಿಯುವ ಹಂತದಲ್ಲಿದ್ದು, ಹಾಗೂ ವಿಶೇಷ ಘಟಕ ಯೋಜನೆಯಡಿ ತೆಗೆದುಕೊಂಡಿದ್ದ 60 ಮನೆಗಳ ಪೈಕಿ 40 ಮನೆಗಳನ್ನು ಪೂರ್ಣಗೊಂಡಿದ್ದು, ಉಳಿದ 10 ಮನೆಗಳ ನಿರ್ಮಾಣಕ್ಕೆ ಜಾಗದ ಲಭ್ಯತೆ ಆಧರಿಸಿ ಪ್ರಾರಂಭಿಸಲಾಗುವುದು.

1999-2000ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಅಂದಾಜುಪಟ್ಟಿಗೆ ಮಂಜೂರಾತಿ ದೊರೆತ ನಂತರ ಕೆಲಸ ಪ್ರಾರಂಭಿಸಲಾಗುವುದು.

ಶಿಗ್ಗಾಂವ್ ಬಸ್ ಡಿಪೋ ಪ್ರಾರಂಭ.

1542 (2221) ಶ್ರೀ ಕುನ್ನೂರು ಮಂಜುನಾಥ ಚೆನ್ನಪ್ಪ (ಶಿಗ್ಗಾಂವ್) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಶಿಗ್ಗಾಂವ್ ಬಸ್ ನಿಲ್ದಾಣದ ನಿರ್ಮಾಣ ಕಾರ್ಯ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು? ಇದರ ನಿರ್ಮಾಣ ಕಾರ್ಯವನ್ನು ಯಾವಾಗ ಪೂರೈಸಿ ಉದ್ಘಾಟನೆ ಮಾಡಲಾಗುವುದು?

2. ಶಿಗ್ಗಾಂವ್‌ನಲ್ಲಿ ಬಸ್ ಡಿಪೋ ನಿರ್ಮಾಣಕ್ಕೆ ಕಂದಾಯ ಇಲಾಖೆಯ ಸುಮಾರು 7 ಎಕರೆ ಜಮೀನು ಲಭ್ಯವಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ ಸದರಿ ಜಮೀನನ್ನು ಕಂದಾಯ ಇಲಾಖೆಯಿಂದ ಪಡೆಯಲು ಸಾರಿಗೆ ಇಲಾಖೆಯು ತೆಗೆದುಕೊಂಡ ಕ್ರಮಗಳೇನು?

4. ಇದರ ನಿರ್ಮಾಣ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

1. ಶಿಗ್ಗಾಂವ್ ಬಸ್ ನಿಲ್ದಾಣದ ಕೆಲವು ಸಣ್ಣ ಪುಟ್ಟ ಅಂತಿಮ ಕೆಲಸಗಳು ಹಾಗೂ ಕರ್ನಾಟಕ ವಿದ್ಯುತ್ ಮಂಡಳಿಯು ಸರ್ವೀಸಿಂಗ್ ನಿರ್ವಹಿಸಬೇಕಾಗಿರುತ್ತದೆ. ಅಲ್ಲದೇ ವಿಳಂಬವಾಗಿರುವುದಕ್ಕೆ ಗುತ್ತಿಗೆದಾರರೂ ಭಾಗಶಃ ಹೊಣೆಗಾರರಾಗಿರುತ್ತಾರೆ. ಸದರಿ ಬಸ್ ನಿಲ್ದಾಣದ ಎಲ್ಲಾ ಕೆಲಸಗಳು ಜುಲೈ 1999ರ ಮೊದಲ ಮರದಲ್ಲಿಪೂರ್ಣಗೊಳ್ಳಲಿದ್ದು ಉದ್ಘಾಟನೆಗೆ ಸಿದ್ಧಪಡಿಸಲಾಗುವುದು.

2. -ಇಲ್ಲಾ-

3. -ಉದ್ಭವಿಸುವುದಿಲ್ಲ.-

4. -ಉದ್ಭವಿಸುವುದಿಲ್ಲ.-